ಮಾಡಿದಾಗ, ಪ್ರತಿಯೊಂದೂ ರಾಜಕೀಯವಾಗಿ ಪ್ರತಿಬಿಟಿಸಿ ಮಾಡುತ್ತಾರೆಂದು ತಾವು ಹೇಳುವುದಾದರೆ ನಾವು ನಿಜಕ್ಕೂ ಅದನ್ನು ಖಂಡಿಸಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇಡೀ ರಾಷ್ಟ್ರದಲ್ಲಿ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಹಾಲಿನ ಬೆಲೆ ಕಡಿಮೆ ಇದೆ. ದೆಹಲಿಯಲ್ಲಿ ಒಂದು ಲೀಟರ್ ಹಾಲಿಗೆ 9 ರೂಪಾಯಿಂದ 14 ರೂಪಾಯಿಯವರೆಗೆ ಮಾರಾಟ ಮಾಡಲಾಗುತ್ತಿದೆ.

ಅಧ್ಯಕ್ಷರು : ರಾಜಕೀಯ ಲಾಬಕ್ಕಾಗಿ ಪ್ರತಿ ಭಟನೆ ಮಾಡುತ್ತಾರೆಂದು ತಾವು ಅವರಿಗೆ ಹೇಳಿದಿರಾ?

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಅವರಿಗೆ ಹೇಳಲಿಲ್ಲ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದರಿಂದ ರಾಜಕೀಯ ಲಾಭ ಎಂದು ಹೇಳುವ ಪ್ರಶ್ನೆ ಬೇರೆ. ರೈತರಿಗೆ ಅನುಕೂಲ ಮಾಡಬೇಕೆನ್ನುವ ಉದ್ದೇಶ ಸರ್ಕಾರಕ್ಕಿದ್ದಿದ್ದರೆ, ಹಾಲಿನ ಬೆಲೆ ಹೆಚ್ಚಳವನ್ನು ಮಾಡದೆ ಸರ್ಕಾರವೇ——ಹೆಚ್ಚುವರಿ ಹಣವನ್ನು ಕೊಡಬಹುದಾಗಿತ್ತು. ಈಗ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿ ಜನರಿಗೆ ತೊಂದರೆಯಾಗಿರುವುದರಿಂದ ಇದನ್ನು ನಾವು ಖಂಡಿಸಬೇಕಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೇ ಅವಮಾನ.

ಶ್ರೀ ಬಿ.ಎನ್. ಬಚ್ಚೇಗೌಡ : ರೈತರಿಗೆ we have transfered 82 paise, ಇದರಲ್ಲಿ ಅವಮಾನ ಏನು ಬಂತು ಹಾಲು ಉತ್ಪಾದಕರ ಕಷ್ಟಕ್ಕೆ ನಾವು ಕೊಟ್ಟಿರತಕ್ಕಂಥಾದ್ದು ಬಹಳ ಕಡಿಮೆ ಅಂದರೆ ಬರೀ 18 ಪೈಸೆಯಷ್ಟು ಮಾತ್ರ ಸಂಸ್ಕರಣೆ ವಿತರಣೆ ಮತ್ತು ಸಾಗಾಣಿಕೆಗಾಗಿ ಖರ್ಚು ಮಾಡಲು ತೆಗೆದುಕೊಳ್ಳಲಾಗಿದೆ. ಅದರಲ್ಲೂ ಕೆಲವು ಒಕ್ಕೂಟಗಳಿಗೆ ಇಡೀ ಒಂದು ರೂಪಾಯಿಯನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ಶಿವಮೊಗ್ಗ ಮುಂತಾದ ಬೇರೆ ಬೇರೆ ಒಕ್ಕೂಟಗಳಿಗೆ entire rupee is transfered to the ryots.

ಶ್ರೀ ಜೆ.ಹೆಚ್ ಪಟೇಲ್ : ಪ್ರತಿಭಟನೆ ಮಾಡುವುದರ ಬಗ್ಗೆ .ಯಾರದೂ ಅಭ್ಯಂತರವಿಲ್ಲ, ಪ್ರತಿಭಟನೆ ಮಾಜುವುದೇ ಒಂದು ರಾಜಕೀಯ, ಅದು ತಮಗೂ ಗೊತ್ತಿದೆ ಪ್ರತಿಭಟನೆ ಮಾಡುವುದು ರಾಜಕೀಯ ಉದ್ದೇಶಕ್ಕಲ್ಲದೆ ಸಾಂಸ್ಕೃತಿಕ ಉದ್ದೇಶಕ್ಕೇ.

ಪಡಿತರ ಚೀಟಿಗಳ ವಿತರಣೆ

235 - ಶ್ರೀ ಕೆ.ಎಸ್. ನಾಗೇಗೌಡ (ಕಿರಿಗಾವಲು) ಶ್ರೀ ಜಿ.ವಿ. ರಾಮರೆಡ್ಡಿ (ಬಾಂಗೆಪಲ್ಲಿ) ಶ್ರೀ ಮುದ್ದಹನುಮೇಗೌಡ (ಕುಣಿಗಲ್) ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಸುವಿರೆ?

(ಅ) ಬಡವರಿಗಾಗಿ ಹಸಿರು, ಕೇಸರಿ ಪಡಿತರ ಚೀಟಿಗಳನ್ನು ಹಂಚುವ .ಯೋಜನೆ ರಾಜ್ಯದಲ್ಲಿ ಯಾವ ದಿನಾಂಕದಿಂದ ಜಾರಿಗೆ ಬಂದಿದೆ

(ಆ) ಈ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟ ಒಟ್ಟು ಫಲಾನುಬವಿಗಳ ಸಂಖ್ಯೆ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ಹಂಚಲಾಗಿದೆ,

(ಇ) ಇನ್ನೂ ಸಿಗಬೇಕಾಗಿರುವ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು.

(ಈ) ಪಟ್ಟಣದಲ್ಲಿರುವ ಬಡವರಿ ಹಸಿರು ಪಡಿತರ ಚೀಟಿ ಹಂಚುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ,

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರಿ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

(ಅ) ದಿನಾಂಕ 1.11.85 ರಿಂದ.

(ಆ) ಪ್ರತಿ ಸಂಸಾರವೂ ರೇಷನ್ ಕಾರ್ಡು ಹೊಂದಲು ಅವಕಾಶವಿದೆ. ಯಾವ ಸಂಸಾರದ ಆದಾಯ ರೂ.6400-00ಕ್ಕೂ ಕಡಿಮೆ ಇದೆಯೋ ಅವರಿಗೆ ತ್ರಿವರ್ಣ : ಹಸಿರು ಕಾರ್ಡು ನೀಡಲಾಗುವುದು. ಮತ್ತು ಉಳಿದವರಿಗೆ ಕೇಸರಿ : ಫೋಟೋ ಕಾರ್ಡು ಕೊಡಲಾಗುವುದು.

ಕೇಸರಿ ಕಾರ್ಡುಗಳ ಸಂಖ್ಯೆ	22,57,334
ಫೋಟೋ ಕಾರ್ಡುಗಳ	24,30,699
ತ್ರಿವರ್ಣ : ಹಸಿರು ಕಾರ್ಡುಗಳು	52,07,379
ಒಟ್ಟು	98,95,412

ಯಾರ್ಯಾರು ಅರ್ಜಿಗಳನ್ನು ಸಲ್ಲಿಸಿದ್ದರೋ. ಅವರೆಲ್ಲರೂ ಕಾರ್ಡುಗಳನ್ನು ಹೊಂದಿರುತ್ತಾರೆ. ಹೊಸದಾಗಿ ಯಾರ್ಯಾರು ಅರ್ಜಿ ಸಲ್ಲಿಸಿರುವರೊ ಅವರಿಗೆ ರೇಷನ್ ಕಾರ್ಡುಗಳನ್ನು ವಿತರಿಸಲಾಗುತ್ತಿದೆ.

ಪಟ್ಟಣ ಹಾಗೂ ನಗರದಲ್ಲಿ ಘೋಷಿಸಲಾದ ಕೊಳ್ಳ ಗೇರಿಗಲಲ್ಲಿ ವಾಸವಾಗಿರುವ ಸಂಸಾರಗಳಿಗೆ ಈಗಾಗಲೆ ತ್ರಿವರ್ಣ : ಹಸಿರು ಪಡಿತರ ಚೀಟಿಗಳನ್ನು ಕೊಡಲಾಗಿದೆ. ಅದರಂತೆ ರಾಜ್ಯದಲ್ಲಿರುವ ಎಲ್ಲಾ ನೇಕಾರ ಸಂಸಾರಗಳಿಗೂ ತ್ರಿವರ್ಣ: ಹಸಿರು ಪಟಿತರ ಚೀಟಿಗಳನ್ನು ವಿತರಿಸಲಾಗಿದೆ. ತ್ರಿವರ್ಣ ಪಡಿತರ ಚೀಟಿಗ ಬದಲಿಗೆ ಹಸಿರು ಪಟಿತರ ಚೀಟಿಗಳನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಈ ಉತ್ತರದಲ್ಲಿ ಸದನಕ್ಕೆ ತಪ್ಪು ಮಾಹಿತಿಯನ್ನು ಸಲ್ಲಿಸುತ್ತಿದ್ದಾರೆ. ಯಾರು ಯಾರು ಅರ್ಜಿ ಸಲ್ಲಿಸಿದ್ದಾರೋ ಅವರಿಗೆ ರೇಷನ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆಯೆಂದು ಹೇಳಿದ್ದಾರೆ. ಇದಕ್ಕೂ ಮೊದಲು ಮಾನ್ಯ ಮುಖ್ಯ-ಮಂತ್ರಿಗಳು, ಇನ್ನೂ ವರದಿಯನ್ನು ತರಿಸಿಕೊಳ್ಳಬೇಕಾಗಿದೆ. ವರದಿಯನ್ನು ತರಿಸಿದ ಮೇಲೆ ಕಾರ್ಡ್‌ಗಳನ್ನು ವಿತರಣೆ ಮಾಡುತ್ತೇವೆಂದು ಹೇಳುತ್ತಾರೆ. ಯಾರ್ಯಾರು ಅರ್ಜಿ ಸಲ್ಲಿಸುದ್ದಾರೋ ಅವರಿಗೆಲ್ಲಾ ರೇಷನ್ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆಯೆಂದು ಆಹಾರ ಸಚಿವರು ಹೇಳತಕ್ಕಂಥಾದ್ದು ಸದನಕ್ಕೆ ತಪ್ಪು ಮಾಹಿತಿಯನ್ನು ಆಹಾರ ಸಚಿವರು ಕೊಡುತ್ತಿದ್ದಾರೆನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ. ನಮ್ಮ ಅನುಭವಕ್ಕೆ ಬಂದಿರುವುದೇನೆಂದರೆ ಅಕ್ಟೋಬರ್, ನವೆಂಬರ್‌ತಿಗಳವರೆಗೂ ಸರ್ವೇ ಆಗುತ್ತದೆಂದು ಅಧಿಕಾರಿಗಳು ಹೇಳಿರುವುದು ಕಂಡು ಬಂದಿದೆ, ಸರ್ಕಾರ ಅಧಿಕಾರಕ್ಕೆ ಬಂದು ಈಗಾಗಲೇ 8 ತಿಂಗಳಾಗಿದೆ., ಸರ್ವೇ ಕೆಲಸ ಅಕ್ಟೋಬರ್‌ವರೆಗೆ ನಡೆಯುತ್ತದೆ. ಅಂದರೆ ಹೆಚ್ಚು ಕಡಿಮೆ 10 ತಿಂಗಳು ಬಡವರಿಗೆ ಆಹಾರ ಧಾನ್ಯ ಸರಬರಾಜು ಮಾಡುವುದಿಲ್ಲವೆಂದು ಇತರ ಅರ್ಥ. ಅವರು ಕೊಟ್ಟಿರುವ ಅಂಕಿ ಅಂಶದ ಪ್ರಕಾರ 98 ಲಕ್ಷದ 95 ಸಾವಿರದ 412 ಕಾರ್ಡ್‌ಗಳನ್ನು ಇದುವರೆಗೆ ವಿತರಣೆ ಮಾಡಿದ್ದಾರೆ. ಅಮೇಲೆ ಹಸಿರು ಕಾರ್ಡ್‌ಗಳ ಬಗ್ಗೆ ಸರ್ಕಾರ ಒಂದು ವಿಚಿತ್ರವಾದ ವಾದವನ್ನ ಮಂಡಿಸಿದ್ದಾರೆ. ಪಟ್ಟಣ ಮತ್ತು ನಗರ ಪ್ರದೇಶಗ ಕೊಳಗೇರಿಗಳಲ್ಲಿ ವಾಸ ಮಾಡತಕ್ಕವರಿಗೆ ತ್ರಿವರ್ಣ ಪಡಿತರ ಚೀಟಿಗಳನ್ನು ಕೊಟ್ಟಿದ್ದಾರೆ. ಅಂದರೆ ಪಟ್ಟಣ ಪ್ರದೇಶಗಳಲ್ಲಿರುವ ಕೊಳಗೇರಿಗಳಲ್ಲಿ ಮಾತ್ರ ಬಡವರು ವಾಸವಾದಿದ್ದಾರೆಂದು ಈ ಸರ್ಕಾರದ ಅಭಿಪ್ರಾಯವಾದಂತಿದೆ. ಆ ಜಾಗದಲ್ಲಿ ಬಿಟ್ಟರೆ ಬೇರೆ ಜಾಗದಲ್ಲಿ ಬಡವರು ಇಲ್ಲವಾ? ಆದ್ದರಿಂದ, ಬೇರೆ ಕಡೆ ಇರುವ ಬಡವರಿಗೆ ತ್ರಿವರ್ಣ ಮತ್ತು ಹಸಿರು ಕಾರ್ಡ್‌ಗಳನ್ನು ಕೊಡುವ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಕೊಳಗೇರಿಗಳಲ್ಲಿರುವ ಬಡವರಿಗೆ ಮಾತ್ರ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಿ

ಬೇರೆ ಕಡೆ ಇರುವ ಬಡವರಿಗೆ ಹಸಿರು ಕಾರ್ಡ್‌ಗಳನ್ನು ಕೊಡಲು ನಿರಾಕರಿಸುತ್ತಿದ್ದಾರೆ. ಇದನ್ನು ಸರಿಪಡಿಸದಿದ್ದರೆ, ಬೇರೆ ಕಡೆ ಇರುವ ಬಡವರು ತೀವ್ರರಾದಂಥ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ.

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಪ್ಪು ಮಾಹಿತಿಯನ್ನು ಕೊಟ್ಟಿಲ್ಲ, ಯಾರು ನಗರ ಪ್ರದೇಶಗಳಿಗೆ ಬಹಳ ವರ್ಷಗಳ ಹಿಂದಿನಿಂದಲೇ ಬಂದಿರುತ್ತಾರೋ ಅವರಿಗೆ ಫೋಟೋ ಕಾರ್ಡ್‌ಗಳನ್ನು ಕೊಟ್ಟಿದ್ದೇವೆ. ಬೆರ ಪ್ರದೇಶದಿಂದ ಬಂದ ಬಗ್ಗೆ ಹಾಗೂ ಇಲ್ಲಿ ವಾಸ ಮಾಡುವ ಬಗ್ಗೆ ಮಾಹಿತಿಗಳನ್ನು ಕೊಡುವಂಥವರಿಗೆ ಫೋಟೋ ಕಾರ್ಡ್‌ಗಳನ್ನು ಕೊಡುತ್ತಿದ್ದೇವೆ. ಆ ಉತ್ತರ ಈ ಹಸಿರು ಕಾರ್ಡ್‌ಗೆ ಅನ್ವಯವಾಗುವುದಿಲ್ಲ.

ಬೆಂಗಳೂರಿಗೋ, ಮೈಸೂರಿಗೋ ನೌಕರರು ಮುಂತಾಗಿ ವರ್ಗಾವಣೆಯಾಗಿ ಬಂದಾಗ ಅಂತೆಯೋ ಯಾವುದೇ ಪಟ್ಟಣ ಪ್ರದೇಶಗಳಿಗೆ ವರ್ಗಾವಣೆಯಾಗಿ ಬಂದಂಥ ಸಂದರ್ಭದಲ್ಲಿ ನಗರ—ಪ್ರದೇಶಗಳಿಗೆ—ಬಂದಂಥವರಿಗೆ ಕೊಡುವ ಕಾರ್ಡ್‌ಗಳಿಗೆ ಈ ಉತ್ತರವು ಅನ್ವಯವಾಗುತ್ತದೆ ಪಟ್ಟಣ ಪ್ರದೇಶದಲ್ಲಿ ಬಡವರಿಗೆ ಕಾರ್ಡ್‌ಗಳನ್ನು ಕೊಡಬೇಕೆಂದು ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ ಹಾಗೆಯೇ ನೇಕಾರರಿಗೆ ಈಗಾಗಲೇ ಹಸಿರು ಕಾರ್ಡ್‌ಗೆ ಮುಖಾಂತರ ಅಕ್ಕಿ ಮತ್ತು ಗೋಧಿಯನ್ನು ರಿಯಾಯತಿ ದರದಲ್ಲಿ ಕೊಡುತ್ತಾ ಇದ್ದೇವೆ ಎಂಬ ಮಾತನ್ನು ತಿಳಿಸ-ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಯಾರ್ಯಾರು ಅರ್ಜಿ ಸಲ್ಲಿಸಿದ್ದಾರೋ ಅವರಿಗೆ ರೇಶನ್ ಕಾರ್ಡ್‌ಗಳನ್ನು ಕೊಡುತ್ತೇವೆ ಎಂದು .....

ಅಧ್ಯಕ್ಷರು : ದಯಮಾಡಿ ತಾವು ಕುಳಿತುಕೊಳ್ಳಿ. ತಮ್ಮ ಜೊತೆಗೆ ಇದೋ ಪ್ರಶ್ನೆಯನ್ನು ಕೇಳಿದವರು ಇನ್ನೂ ನಾಲ್ಕು ಜನರು ಇದ್ದಾರೆ. ಅವರಿಗೆ ಅವಕಾಶ ಕೊಡಬೇಕು. ಮತ್ತೆ ತಾವು ಉಪಪ್ರಶ್ನೆಗಳನ್ನು ಕೇಳಬಹುದು.

ಶ್ರೀ ಎಸ್.ಪಿ. ಮುದ್ದ ಹನುಮೆಗೌಡ : ಮಾನ್ಯ ಅಧ್ಯಕ್ಷರೇ, ಈ ಕಾರ್ಡ್‌ಗಳ ಬದಲಾವಣೆ ವ್ಯವಸ್ಥೆಯಲ್ಲಿ ಅರ್ಹ ಫಲಾನುಭವಿಗಳಿಗೆ ಕಾರ್ಡ್‌ಗಳು ಸಿಗುತ್ತಾ ಇಲ್ಲ ಎಂಬ ಕೂಗು ನಮ್ಮ ಗ್ರಾಮಿಣ ಪ್ರದೇಶಗಳಲ್ಲಿ ಎಲ್ಲಾ ಕಡೆಗಳಲ್ಲಿಯೂ ಕಂಡು ಬರುತ್ತಾ ಇದೆ. ಕಾರ್ಡ್‌ಗಳ ಬದಲಾವಣೆ ವ್ಯವಸ್ಥೆಯಲ್ಲಿ ಯಾರು ಹಳೇ ಕಾರ್ಡ್‌ದಾರರು ಯಾರು ಇದ್ದಾರೋ ಅವರಿಗೆ ಆಹಾರದಾನ್ಯಗಳ ಪೂರೈಕೆಯು ಸರಿಯಾಗಿ ಆಗುತ್ತಾ ಇಲ್ಲ, ಹಳೆಯ ಕಾರ್ಡ್‌ಗಳಿಗೆ ಅಂಗಡಿಗಳವರು ಪಡಿತರ ವಸ್ತುಗಳನ್ನು ಕೊಡುತ್ತಾ ಇಲ್ಲ ಎಂಬ ದೂರು ಕೂಡ ಇದೆ. ಈ ಬಗ್ಗೆ ಸ್ಪಷ್ಟವಾದಂತ ಏನಾದರೂ ಒಂದು ನಿರ್ಧಾರವನ್ನು ತೆಗೆದುಕೊಂಡು , ಅದಕ್ಕೆ ಒಂದು ಸ್ಪಷ್ಟವಾದ ದಿನಾಂಕವನ್ನು ನಿಯುಕ್ತಿ ಮಾಡಿ ಕಾರ್ಡ್‌ಗಳನ್ನು ಹಂಚಬೇಕು. ಹಾಗೆಯೇ ಎಲ್ಲಾ ಕಾರ್ಡ್‌ದಾರರಿಗೂ ಕೂಡ ಆಹಾರಧಾನ್ಯಗಳನ್ನು ಕೊಡಬೇಕು. ಅಂತೆಯೇ ಕಾರ್ಡ್ ಕೊಡುವಾಗ ಯಾವ ಆರ್ಥಿಕ ಮಾನದಂಡವನ್ನು ಇಟ್ಟುಕೊಂಡಿದ್ದೀರಿ, ಅದರಲ್ಲಿ ಅಧಿಕಾರಗಳು ತಮಗೆ ಇಷ್ಟ ಬಂದ ಹಾಗೆ ಮಾಡುತ್ತಾ ಇದ್ದಾರೆ. ಅವರಿಗೆ ಇಷ್ಟ ಬಂದ ಹಾಗೆ ಕಾರ್ಡ್‌ಗಳನ್ನು ಕೊಡುತ್ತಾ ಇದ್ದಾರೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಮಾನ್ಯ ಸಚಿವರು ಬಹಳ ಕಾಳಜಿಯನ್ನು ವಹಿಸಿ ಅರ್ಹ ಫಲಾನುಭವಿಗಳಿಗೆ ಮಾತ್ರ ಕಾರ್ಡ್‌ಗಳನ್ನು ಕೊಡತಕ್ಕಂಥ ಕಾರ್ಯವನ್ನು ಮಾಡಬೇಕೆಂದು ವಿಚಾರವನ್ನು ತಮ್ಮ ಮೂಲಕ ಹೇಳ-ಬಯಸುತ್ತೇನೆ.

ಶ್ರೀ ಯು.ಜಿಯ ಬಣಕಾರ : ಮಾನ್ಯ ಅಧ್ಯಕ್ಷರೇ, ಮಾನ್ ಆಹಾರ ಸಚಿವರು ಕಳೆದ ಅಧಿವೇಶನ ಕಾಲದಿಂದಲೂ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಬಂದಿದ್ದಾರೆ. ಇವೊತ್ತಿನ ಪ್ರಶ್ನೆಗೆ ಉತ್ತರಸುತ್ತಾ ಹೊಸದಾಗಿ

ಯಾರ್ಯಾರು ಅರ್ಜಿ ಸಲ್ಲಿಸುತ್ತಾರೋ ಅವರಿಗೆ ರೇಶನ್ ಕಾರ್ಡ್‌ಗಳನ್ನು ವಿತರಿಸಲಾಗುವುದೆಂದು ಹೇಳಿದ್ದಾರೆ. ಅಂತೆಯೆ ಧಾರವಾಡ ಜಿಲ್ಲೆಯಲ್ಲಿ 1500 ಫೋಟೋ ಪಡಿತರ ಚೀಟಿ ಅಂದರೆ ಒಂದು ತಾಲ್ಲೂಕಿಗೆ 150ಪಡಿತರ ಚೀಟಿಗಳು ಬರುತ್ತವೆ. ಈಗ ಮುಖ್ಯಮಂತ್ರಿಯವರು ಹೊಸದಾಗಿ ಸರ್ವೆ ಮಾಡುತ್ತೇವೆಂದು ಹೇಳಿದ್ದಾರೆ ಆದ್ದರಿಂದ ಹಸಿರು ಕಾರ್ಡ್‌ಗಳನ್ನು ಕೊಡುವ ಬಗ್ಗೆ ಹೊಸದಾಗಿ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ ಎಂಬ ಬಗ್ಗೆ ನಿರ್ದಿಷ್ಟವಾದಗಿ ಹೇಳಬೇಕು. ಅದನ್ನು ಬಿಟ್ಟು ಮುಖ್ಯಮಂತ್ರಿಯವರು ಒಂದು ಹೇಳುವುದು, ಆಹಾರ ಸಚಿವರು ಒಂದು ಹೇಳುವುದು ಬೇಡ. ಈ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಸಚಿವರಿಂದ ಕೇಳಬಯಸುತ್ತೇನೆ.

ಶ್ರೀ ಕೆ.ಎಸ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಚಿವರು ಹೇಳಿದ ರೀತಿಯಲ್ಲಿ ಕಾರ್ಡ್‌ಗಳನ್ನು ಕೊಡುವ ವಿಚಾರದಲ್ಲಿ ಸರ್ವೆ ಮಾಡುತ್ತಿದ್ದೇವೆ ಎಂಬುದನ್ನು ಹೇಳಿದ್ದಾರೆ. ಈ ಸರ್ವೆ ಯಾವಾಗ ಮುಗಿಯುತ್ತದೆ ಮತ್ತು ಇದಕ್ಕೆ ಟೈಬಾಂಡ್ ಪ್ರೋಗ್ರಾಂನ್ನು ಏನಾದರೂ ಹಾಕುತ್ತೀರಾ? ಎಷ್ಟು ದಿವಸಗಳೊಳಗಾಗಿ ಈ ಕಾರ್ಡ್‌ಗಳನ್ನು ಅಂತಿಮವಾಗಿ ಕೊಡುತ್ತೀರಿ. ಇದರ ಜವಾಬ್ದಾರಿಯನ್ನು ಯಾರಿಗೆ ವಹಿಸುತ್ತೀರಿ ಎಂಬುದನ್ನು ಹೇಳಬೇಕು. ಎರಡನೇದಾಗಿ ಈಗಾಗಲೇ ಸಾಕಷ್ಟು ಕಾರ್ಡ್‌ಗಳನ್ನು ಕೊಟ್ಟಿದ್ದೇವೆ ಮತ್ತು ಸಾಕಷ್ಟು ನ್ಯಾಯಬೆಲೆ ಅಂಗಡಿಗಳನ್ನು ಮಾಡಿದ್ದೇವೆ ಇನ್ನೂ ಬೇಡಿಕೆ ಜಾಸ್ತಿ ಇದೆ. ಆದರೆ ನಮಗೆ ಕೇಂದ್ರದಿಂದ ಬರತಕ್ಕಂಥ ಸೀಮೆ ಎಣ್ಣೆಯಾಗಲೀ, ಅಕ್ಕಿ, ಗೋಧಿಯಾಗಲೀ, ಅದು ಈಗಿರತಕ್ಕಂಥ ಕಾರ್ಡ್‌ದಾರರಿಗೆ ಸಾಕಾಗುತ್ತದೆಯೇ? ಒಂದು ವೇಳೆ ಕೊರತೆ ಇದ್ದರೆ ಅದನ್ನು ಯಾವರೀತಿಯಲ್ಲಿ ತುಂಬಿಕೊಳ್ಳುತ್ತೀರಿ?

ಶ್ರೀ ಎಸ್. ನಂಜಪ್ಪ : ಮಾನ್ಯ ಅಧ್ಯಕ್ಷರೇ ಅರ್ಹ ಕಾರ್ಡ್‌ದಾರರಿಗೆ ಆಹಾರಪದಾರ್ಥಗಳನ್ನು ಸರಿಯಾಗಿ ಕೊಡುತ್ತಾ ಇಲ್ಲ ಎಂಬ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಯವ ಕಾರ್ಡ್‌ದಾರರಿಗೂ ಕೂಡ ಆಹಾರಪದಾರ್ಥಗಳ ಹಂಚಿಕೆಯನ್ನು ನಿರಾಕರಿಣೆ ಮಾಡುವಂತಿಲ್ಲ. ಅಂಥ ನಿರ್ದಿಷ್ಟ ಪ್ರಕರಣಗಳನ್ನು ನನ್ನ ಗಮನಕ್ಕೆ ತಂದರೆ ಅದಕ್ಕೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಶ್ರೀ ರಾಮರೆಡ್ಡಿಯವರು ಮಾತನಾಡುತ್ತಾ ಮಾನ್ಯ ಮುಖ್ಯಮಂತ್ರಿಯವರ ಉತ್ತರದಲ್ಲಿ ಮತ್ತು ನನ್ನ ಉತ್ತರದಲ್ಲಿ ವ್ಯತ್ಯಾಸವಿದೆ ಎಂದು ಹೇಳಿದ್ದಾರೆ. ಆದರೆ ವ್ಯತ್ಯಾಸವಿಲ್ಲ. ಯಾರು ಬಡತನರೇಖೆಯಿಂದ ಕೆಳಗಡೆ ಇರುತ್ತಾರೋ ಅವರಿಗೆ ಹಸಿರು ಕಾರ್ಡ್‌ನ್ನು ಕೊಡುತ್ತೇವೆ. ಇದನ್ನು ಗುರುತಿಸುವ ದಿಕ್ಕಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು . ಕೊಟ್ಟಿದ್ದಾರೆ. ಬಡತನರೇಖೆಗಿಂತ ಮೇಲಿರುವವರಿಗೆ ಕೇಸರಿ ಕಾರ್ಡ್‌ನ್ನು ಕೊಡುತ್ತಿದ್ದೇವೆ. ಈ ವಿಚಾರದಲ್ಲಿ ಯಾರು ಇಂಥ ಸ್ಥಳದಲ್ಲಿ ವಾಸವಾಗಿದ್ದಾರೆ ಎಂಬುದನ್ನು ತಿಳಿದುಕೊಂಡು ಅಂಥವರಿಗೆ ಕೊಡುತ್ತೇವೆ. ಮಾನ್ಯ ಮುಖ್ಯಮಂತ್ರಿಯವರು ಹಸಿರು ಕಾರ್ಡ್‌ಗಳನ್ನು ಕೊಡುವಾಗ ಬಡವರನ್ನು ಗುರುತಿಸುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಹಸಿರು ಕಾರ್ಡ್ ಮತ್ತು ಫೋಟೋ ಕಾರ್ಡ್‌ಗಳನ್ನು ಕೊಡುವಾಗ ಯಾರ್ಯಾರು ಇಂಥ ಕಡೆಗಳಲ್ಲಿ ವಾಸವಾಗಿದ್ದಾರೆ ಎಂದು ತಿಳಿಸಿ ಅರ್ಜಿ ಹಾಕುತ್ತಾರೋ ಅವರಿಗೆ ಈ ಕಾರ್ಡ್‌ಗಳನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ, ಎಷ್ಟು ದಿನಗಳಲ್ಲಿ ಹಳೆಯ ಕಾರ್ಡ್‌ಗಳಿಗೆ ಹೊಸಕಾರ್ಡ್‌ಗಳನ್ನು ಕೊಡುತ್ತೀರಿ ಎಂಬ ಪ್ರಶ್ನೆಯನ್ನು ಮಾನ್ಯ ನಾಗೇಗೌಡರವರು ಕೇಳಿದ್ದಾರೆ. ಆದಷ್ಟು ಜಾಗ್ರತೆಯಾಗಿ ವಿತರಣೆಯನ್ನು ಮಾಡುತ್ತೇವೆ ಎಂಬ ವಿಚಾರವನ್ನು ಹೇಳಬಯಸುತ್ತೇನೆ. ಅಂತೆಯೇ ಮಾನ್ಯರು ಕೇಂದ್ರದಿಂದ ಆಹಾರಧಾನ್ಯಗಳನ್ನು ವಿತರಣೆ ಕೊಡುವಂಥ ಸಂದರ್ಭದಲ್ಲಿ ಹೆಚ್ಚು ಕಾರ್ಡ್‌ಕೊಟ್ಟರೆ ಅಷ್ಟೇ ಅಗತ್ಯ ಬೀಳುವ ಆಹಾರಧಾನ್ಯಗಳು ಲಭ್ಯವಾಗುತ್ತಿವೆಯೇ ಎಂಬ ಪ್ರಶ್ನೆಯನ್ನು

ಕೇಳಿದ್ದಾರೆ. ನಮಗೆ ಅಕ್ಕಿ ಮತ್ತು ಗೋಧಿಯ ವಿಚಾರದಲ್ಲಿ ಯಾವುದೇ ವಿಧವಾದ ತೊಂದರೆಯೇ ಇಲ್ಲ, ಆದರೆ ಸಕ್ಕರೆ ಮತ್ತು ಸೀಮೆ ಎಣ್ಣೆಯು ನಮಗೆ ಅಗತ್ಯವಿರುವಷ್ಟು ಪ್ರಮಾಣದಲ್ಲ ಕೊಡಲಾಗುತ್ತಾ ಇಲ್ಲ, ನಮಗೆ ಸಕ್ಕರೆಯು 17,800ಮೆಟ್ರಿಕ್ ಟನ್‌ಗಳಷ್ಟು ಲಭ್ಯವಿದ್ದು 39 ಸಾವಿರ ಮೆಟ್ರಿಕ್‌ಟನ್‌ಗಳು ನಮಗೆ ಬೇಕಾಗುತ್ತದೆ. ಸೀಮೆ ಎಣ್ಣೆಯು ನಮಗೆ 98ಸಾವಿರ ಕಿ. ಎಲ್‌ಗಳಷ್ಟು ಬೇಕಾಗಿದದು ನಮಗೆ ಈಗ 49 ಸಾವಿರ ಕಿಎಲ್‌ಗಳಷ್ಟು ಕೊಡುತ್ತಾ ಇದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಯವರು 7-1-1995ರಲ್ಲಿ ನಮ್ಮ ರಾಜ್ಯಕ್ಕೆ ಹೆಚ್ಚಿಗೆ ಸೀಮೆ ಎಣ್ಣೆ ಮತ್ತು ಸಕ್ಕರೆ ಕೊಡಬೇಕೆಂದು ಹೇಳಿ. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ, ಪತ್ರ ಬರೆದಿದ್ದಾರೆ ಸೀಮೆ ಎಣ್ಣೆಯನ್ನು ಹೆಚ್ಚಿಗೆ ಕೊಡುತ್ತೇವೆಂದು ಕೇಂದ್ರ ಸರಕಾರದವರು ಒಪ್ಪಿಕೊಂಡಿದ್ದಾರೆ. ಸಕ್ಕರೆಯನ್ನು 5ಪರ್‌ಸೆಂಟ್ ಎನು ಅಲಾಟ್‌ಮೆಂಟ್ ಇದೆ, ಅದನ್ನು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅಕ್ಕಿ ಮತ್ತು ಗೋಧಿ ವಿಚಾರದಲ್ಲಿ ಹೆಚ್ಚು ಕಾರ್ಡ್‌ಗಳನ್ನು ಕೊಟ್ಟರೆ ಕಾರ್ಡ್‌ದಾರರಿಗೆ ಹಂಚಲು ಯಾವುದೇ ತೊಂದರೆ ಇಲ್ಲ ಎಂದು ಹೇಳ 'ಬಯಸುತ್ತೇನೆ.

ಶ್ರೀ ಜಿ.ವಿ. ರಾಮರೆಡ್ಡಿ : ಮಾನ್ಯ ,ಸಚಿವರು ಉತ್ತರದಲ್ಲಿ ಪಟ್ಟಣ ಪ್ರದೇಶದಲ್ಲರುವ ಕೊಳಗೇರಿಗಳರುವವರಿಗೆ ಮಾತ್ರ ಹಸಿರು ಕಾರ್ಡ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಪಟ್ಟಣಪ್ರದೇಶದಲ್ಲಿರುವ ಎಲ್ಲಾ ಬಡವರಿಗೆ ಕೊಡುರ ಬಗ್ಗೆ ಸರಕಾರದ ನಿಲುವು ಎನು ಎಂಬುದನ್ನು ಹೇಳಬೇಕು, ಎರಡನೇದಾಗಿ ಅರರು ಸರಿಯಾದ ಮಾಹಿತಿಗಳನ್ನು ಕೊಟ್ಟಿದ್ದವೆ ಎಂದು ಹೇಳಿದ್ದಾರೆ ಯಾರ್ಯಾರು ಅರ್ಜಿಗಳನ್ನು ಕೊಟ್ಟಿದ್ದಾರೋ ಅವರಿಗೆ ಸೂಕ್ತ ಪರಿಶೀಲನೆಯ ನಂತರ ಕಾರ್ಡ್‌ಗಳನ್ನು ಕೊಡಲಾಗುವುದು ಎಂದು ಹೇಳಿದ್ದಾರೆ. ಎಲ್ಲಾ ಕಡೆಗಳಲ್ಲಿ ಅರ್ಜಿ ಹಾಕಿದವವು ಇದ್ದಾರೆ. ಆದರೆ ಅವರೆಲ್ಲರಿಗೂ ಕಾರ್ಡ್ ವಿತರಣೆಯಾಗುತ್ತಾ ಇಲ್ಲ, ಅದಕ್ಕೆ ನಿಮ್ಮ ಸರಕಾರರದ ಅಧಿಕಾರಿಗಳು ಕೊಡತಕ್ಕಂಥ ಉತ್ತರ ಅಂದರೆ ನಾವು ಸರ್ವೆ ಮಾಡಿ ಅಕ್ಟೋಬರ್ ತಿಂಗಳ ನಂತರ ಕಾರ್ಡ್‌ಗಳನ್ನು ಕೊಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಕೂಡ ಅದನ್ನೇ ಹೇಳಿದ್ದಾರೆ. ಆದರೆ ನೀವು ಮಾತ್ರ ಹೀಗೆ ಹೇಳುತ್ತಿದ್ದೀರಿ.

ಶ್ರೀ ಎಸ್. ನಂಜಪ್ಪ : ನಾವು ಅರ್ಹ ಬಡವರಿಗೆ ಮಾತ್ರ ಸರ್ವೇ ಮಾಡಿ ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಹೊಸದಾಗಿ ಬೆಂಗಳೂರಿಗೆ ನಾಗರೀಕರು ಬಂದಾಗ ನಾವು ಅವರಿಗೆ ಕೊಡುವಂಥಾದ್ದು ಕೇಸರಿ ಮತ್ತು ಫೋಟೋ ಕಾರ್ಡ್‌ಗಳು.

ಅಧ್ಯಕ್ಷರು : ಅವರು ಕೇಳಿದ್ದುದು ಕೊಳಿಗೇರಿಗಳಲ್ಲಿರುವವರಿಗೆ ಮಾತ್ರ ಹಸಿರು ಕಾರ್ಡ್ ಕೊಡುತ್ತಿದ್ದಾರೆ. ಪಟ್ಟಣಪ್ರದೇಶದ ಬಡವರಿಗೆ ಕೊಡುತ್ತಿಲ್ಲ, ಬಡವರು ಎಲ್ಲಿದ್ದರೂ ಬಡವರೇ, ಆದ್ದರಿಂದ ಎಲ್ಲಾ ಅರ್ಹ ಬಡವರಿಗೂ ಕಾರ್ಡ್‌ಗಳನ್ನು ಕೊಡುತ್ತೇವೆಂದು ಹೇಳಿರಿ.

ಶ್ರೀ ಎಸ್. ನಂಜಪ್ಪ : ಆಯಿತು. ಆ ಬಗ್ಗೆ ಸರ್ವೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಮಲ್ಪಮಿನುಗಾರಿಕಾ ಬಂದರು ಎರಡನೆಯ ಹಂತದ ಯೋಜನೆ

344 ಶ್ರೀ ಯು,ಆರ್. ಸಭಾಪತಿ (ಉಡುಪಿ) : ಮಾನ್ಯ ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರ ದಯವಿಟ್ಟು ಉತ್ತರಿಸುವಿರೆ.

(ಅ) ಮಲ್ಪೆ ಮಿನುಗಾರಿಕಾ ಬಂದರಿನ 2ನೇ ಹಂತದ ಯೋಜನೆಗೆ ಕೇಂದ್ರ ಸರ್ಕಾರದವರು ಅನುಮತಿ ನೀಡಿದ್ದಾರೆಯೇ.